ದಿನಾಂಕ: **21-01-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಶ್ರೀ ಎಸ್.ಹೆಚ್.ಕೆ., ಪರವಾಗಿ ಎಂ.ಹೆಚ್. ಡಬ್ಲ್ಯೂ., ಆರೋಪಿ ಪರ ವಕೀಲರಿಂದ:

ನಾನು ಈ ಉದ್ಯೋಗವನ್ನು 10-12 ವರ್ಷಗಳಿಂದ ಮಾಡುತ್ತಿದ್ದೇನೆ. ಕೋಳಿಗಳನ್ನು ಖರೀದಿ ಮಾಡಿ ಮಾರಾಟ ಮಾಡುವುದು. ಹಲವಾರು ಕಂಪನಿಗಳಿಂದ ಕೋಳಿಗಳನ್ನು ಖರೀದಿ ಮಾಡಿರುತ್ತೇನೆ. ಸುಗುಣಾ, ವೆಂಕಟೇಶ್ವರ, ಕ್ವಾಲಿಟಿ ಎನಿಮಲ್ ಫೀಡ್ಸ್ ಆ್ಯಂಡ ಫುಡ್ಸ್, ಅಂಕಿತಾ, ಹಿರಣ್ಯಕೇಶ ಮುಂತಾದ ಕಂಪನಿಗಳಿಂದ ಖರೀದಿ ಮಾಡುತ್ತೇನೆ. ಅವುಗಳ ಬಗ್ಗೆ ನಿಮ್ಮ ಫಿರ್ಯಾದಿ ಹಾಗೂ ನೋಟಿಸನಲ್ಲಿ ಹೇಳಿ ಬರೆಸಿರುತ್ತೀರಾ ಅಂದರೆ ನೆನಪಿರುವುದಿಲ್ಲ. ಈಗ ಹೇಳಿರುವ ಕಂಪನಿಗಳು ನಿಮ್ಮ ನೋಟಿಸ ಹಾಗೂ ಫಿರ್ಯಾದಿಯಲ್ಲಿ ಇರುವುದಿಲ್ಲ ಅಂದರೆ ಹಲವಾರು ಕಂಪನಿಗಳು ಅಂತಾ ಬರೆಸಿರುತ್ತೇನೆ. ಈಗ ಮೇಲೆ ಹೇಳಿದಂತಹ ಹೆಸರುಗಳನ್ನು ನಿಮ್ಮ ಫಿರ್ಯಾದಿ ಹಾಗೂ ನೋಟಿಸನಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ ಅಂದರೆ ಇರಲಿಲ್ಲ. ಬಾಯ್ಲರ ಚಿಕನ್‌ಗಳನ್ನು ಖರೀದಿ ಮಾಡಿದಾಗ ಅವುಗಳ ಬಗ್ಗೆ ಅಕೌಂಟ ಮಾಡುತ್ತೀರಿ ಅಂದರೆ ಹೌದು. ಖರೀದಿ ಮಾಡಿದ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡುತ್ತೀರಾ ಅಂದರೆ ಹೌದು. ಆದಾಯ ತೆರಿಗೆ ಪಾವತಿ ತೆಗಿಸುವಾಗ ಖರ್ಚಿನ ಬಗ್ಗೆ, ಆದಾಯದ ಬಗ್ಗೆ ಹಾಗೂ ಬರಬೇಕಾದ ಹಣದ ಬಗ್ಗೆ ನಮೂದು ಮಾಡಿರುತ್ತೀರಿ ಅಂದರೆ ಹೌದು. ಯಾರ ಕಡೆಯಿಂದ ಹಣ ಬರಬೇಕು ಅವರ ಕಡೆಯಿಂದ ಹಣ ಬರಬೇಕು ಅಂತಾ ಆದಾಯ ತೆರಿಗೆಯಲ್ಲಿ ಹೇಳಿರುತ್ತೀರಿ ಅಂದರೆ ಹೌದು. ಈ ಆರೋಪಿಯಿಂದ ಇಂತಿಷ್ಟು ಹಣ ಬರಬೇಕು ಅಂತಾ ನಿಮ್ಮ ಆದಾಯ ತೆರಿಗೆಯಲ್ಲಿ ತೋರಿಸಿರುತ್ತೀರಿ ಅಂದರೆ ತೋರಿಸಿರುತ್ತೇನೆ. ಆ ದಾಖಲೆಯನ್ನು ಹಾಜರಪಡಿಸಿರುತ್ತೀರಾ ಅಂದರೆ ಹಾಜರು ಮಾಡಿರುತ್ತೇನೆ, ಒಂದು ವೇಳೆ ಹಾಜರಪಡಿಸದೇ ಇದ್ದರೆ ಹಾಜರಪಡಿಸುತ್ತೇನೆ. ನೀವು ಹಾಜರಪಡಿಸಿರುವ ದಾಖಲೆಗಳಲ್ಲಿ ಆ ದಾಖಲೆ ಬಗ್ಗೆ ಇರುವುದಿಲ್ಲ ಅಂದರೆ ಇರುವುದಿಲ್ಲ, ಹಾಜರಪಡಿಸುತ್ತೇನೆ. ಆರೋಪಿ ಬಿಡಿ ಗ್ರಾಮದವರಿದ್ದು, ಶಶಿ ಎಂಬುವವರಿಂದ ಪರಿಚಯವಾಗಿರುತ್ತಾರೆ. ಆರೋಪಿಗೆ ಯಾವ ಯಾವ ದಿನಾಂಕದಂದು, ವರ್ಷದಂದು ಕೋಳಿಗಳನ್ನು ನೀಡಿರುತ್ತೀರಿ ಅಂದರೆ 2018

ನವೆಂಬರ, ಡಿಸೆಂಬರ, 2019 ಜನೇವರಿಯಂದು ಕೋಟ್ಟಿರುತ್ತೇನೆ. ಎಷ್ಟು ಮೊತ್ತದ ಕೋಳಿಯನ್ನು ಅವರಿಗೆ ನೀಡಿರುತ್ತೀರಾ ಅಂದರೆ ದಾಖಲೆಯನ್ನು ನೋಡಿ ಹೇಳಬೇಕು. ಕೋಳಿಗಳನ್ನು ಕೊಟ್ಟಾಗ ಅದರ ಬಗ್ಗೆ ರಸೀದಿಗಳನ್ನು ಹರಿತ್ತೀರಿ ಅಂದರೆ ಹೌದು. ಕೋಳಿಯನ್ನು ಕೊಟ್ಟಾಗ ಮಾರಾಟ ಮಾಡಿದ ಬಿಲ್‌ನ್ನು ಕೊಡುತ್ತೇವೆ. ಕೋಳಿಯನ್ನು ಖರೀದಿ ಮಾಡಿದವರಿಗೆ ಬಿಲ್ ಕೊಟ್ಟಿರುತ್ತೀರಿ ಅಂದರೆ ಹೌದು. ಕೊಟ್ಟಾಗ ಅದರ ಮೇಲೆ ಸಹಿ ಪಡೆದಿರುತ್ತೀರಿ ಅಂದರೆ ಹೌದು. ಎಷ್ಟು ಕೋಳಿಗಳನ್ನು ಕೊಟ್ಟಿರುತ್ತೀರಿ ಎಷ್ಟು ಹಣ ಪಡೆದಿರುತ್ತೀರಿ ಎಂಬುದರ ಬಗ್ಗೆ ಲಿಸ್ಟ ಆಫ್ ಅಕೌಂಟನ್ನು ಮಾಡಿರುತ್ತೀರಿ ಅಂದರೆ ಹೌದು. ಆರೋಪಿಗೆ ಎಷ್ಟು ಮೊತ್ತದ ಕೋಳಿಗಳನ್ನು ಕೊಟ್ಟಿರುತ್ತೀರಿ ಎಂಬುದರ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿರುತ್ತೀರಾ ಅಂದರೆ ಹಾಜರಪಡಿಸುತ್ತೇನೆ. ಕೋಳಿಗಳನ್ನು ನೀಡಿದ ಬಗ್ಗೆ ಬುಕ್ಸ ಆಫ ಅಕೌಂಟನ್ನು ನ್ಯಾಯಾಲಯಕ್ಕೆ ಹಾಜರಪಡಿಸುತ್ತೀರಾ ಅಂದರೆ ಹಾಜರಪಡಿಸಬಲ್ಲೆ. ಸಾಕ್ಷಿಯು ಮುಂದುವರೆದು ಹೀಗೆ 5-6 ವರ್ಷ ಹಿಂದಿರುವ ಅಕೌಂಟ್ಸ ಆಫ ಬುಕ್‌ನ್ನು ಹಾಜರಪಡಿಸುತ್ತೇನೆ. ನೀನು ಯಾವುದೇ ಬುಕ್ ಆಫ ಅಕೌಂಟ್ಸನ್ನು ಪಾಲನೆ ಮಾಡದೇ ಇರುವ ಕಾರಣ 5-6 ವರ್ಷದ ಅಕೌಂಟನ್ನು ಹಾಜರಪಡಿಸುತ್ತೇನೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗೆ ಇಂತಿಷ್ಟೇ ಕೋಳಿಗಳನ್ನು ಕೊಟ್ಟಿರುತ್ತೇನೆ ಅಂತಾ ನೋಟಿಸ್ ಮತ್ತು ಫಿರ್ಯಾದಿಯಲ್ಲಿ ಹೇಳಿರುವುದಿಲ್ಲ ಅಂದರೆ, ಹೇಳಿರುವುದಿಲ್ಲ ಆದರೆ ಕೊಡಬೇಕಾದ ಹಣದ ಬಗ್ಗೆ ಮಾತ್ರ ಹೇಳಿರುತ್ತೇನೆ. ಆರೋಪಿಗೆ ಇಂತಿಷ್ಟೇ ಕೋಳಿಗಳನ್ನು ಕೊಟ್ಟಿರುತ್ತೇನೆ ಅಂತಾ ಹೇಳಿ ಬರೆಸಲು ತೊಂದರೆ ಇರುವುದಿಲ್ಲ ಅಂದರೆ ಇರುವುದಿಲ್ಲ.

ನಿಮ್ಮದು ಬಾಳು ಮಾಮಾ ಟ್ರೇಡರ್ಸ ಅಂದರೆ ಹೌದು.

ದಿನಾಂಕಃ 06-11-2018 ರಂದು ರೂ. 1,20,124/- ಜಮಾ ಆಗಿರುತ್ತದೆ ಅಂದರೆ ನನ್ನ ಬ್ಯಾಂಕ್ ಸ್ಟೇಟಮೆಂಟ ನೋಡಬೇಕು.

ದಿನಾಂಕಃ 17-11-2018 ರಂದು ರೂ.2,05,078/- ಗಳು ಜಮಾ ಆಗಿದೆ ಅಂದರೆ ನನ್ನ ಬ್ಯಾಂಕ್ ಸ್ಟೇಟಮೆಂಟ ನೋಡಬೇಕು.

C.C. 1524/2023

ಪಿಡಬ್ಲ್ಯು-1

ದಿನಾಂಕ: 18-11-2018 ರಂದು ರೂ. 1,00,000/- ಹಣ ಜಮಾ ಆಗಿರುತ್ತದೆ ಅಂದರೆ ನನ್ನ ಬ್ಯಾಂಕ ಸ್ಟೇಟಮೆಂಟ ಪ್ರಕಾರ ನೋಡಬೇಕಾಗುತ್ತದೆ.

ದಿನಾಂಕ: 01-12-2018 ರಂದು ರೂ. 1,40,037/- ಗಳು ಜಮಾ ಆಗಿರುತ್ತದೆ ಅಂದರೆ ನನ್ನ ಬ್ಯಾಂಕ್ ಸ್ಟೇಟಮೆಂಟ ನೋಡಬೇಕು.

ದಿನಾಂಕ: 27-12-2018 ರೂ. 1,15,332/- ಗಳು ಜಮಾ ಆಗಿರುತ್ತದೆ ಅಂದರೆ ಬ್ಯಾಂಕ್ ಸ್ಟೇಟಮೆಂಟ ನೋಡಬೇಕಾಗುತ್ತದೆ.

ದಿನಾಂಕ: 28-12-2018 ರಂದು ರೂ 45,000/- ಗಳು ಜಮೆಯಾಗಿರುತ್ತದೆ ಅಂದರೆ ನನ್ನ ಬ್ಯಾಂಕ್ ಸ್ಟೇಟಮೆಂಟ ನೋಡಬೇಕು.

ದಿನಾಂಕ: 11-12-2018 ರಂದು ರೂ.1,00,000/- ಗಳು ಜಮೆಯಾಗಿರುತ್ತದೆ ಅಂದರೆ ನನ್ನ ಬ್ಯಾಂಕ್ ಸ್ಟೇಟಮೆಂಟ ನೋಡಬೇಕು.

ದಿನಾಂಕ: 12-01-2019 ರಂದು ರೂ 1,05,000/- ಗಳು ಜಮೆಯಾಗಿರುತ್ತದೆ ಅಂದರೆ ನನ್ನ ಬ್ಯಾಂಕ್ ಸ್ಟೇಟಮೆಂಟ ನೋಡಬೇಕು.

ನಿಮಗೆ ಕೊಡಬೇಕಾದ ಎಲ್ಲಾ ಮೊತ್ತವನ್ನು ಆರೋಪಿ ಬ್ಯಾಂಕಿನ ಮೂಲಕ ಜಮಾ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಆ ರೀತಿ ಆರೋಪಿ ಹಣ ಕೊಟ್ಟಿದ್ದರು ಕೂಡಾ ಉದ್ದೇಶಪೂರ್ವಕವಾಗಿ ಹಣ ಕೊಟ್ಟಿಲ್ಲ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಮೇಲೆ ಹೇಳಿದ ವ್ಯವಹಾರ ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರವನ್ನು ಆರೋಪಿ ನಿಮ್ಮ ಬಳಿ ಮಾಡಿರುವುದಿಲ್ಲ ಅಂದರೆ ಮಾಡಿರುತ್ತಾರೆ. ಈ ಮೇಲೆ ಹೇಳಿದ ವರ್ಷಗಳನ್ನು ಹೊರತುಪಡಿಸಿ ಬೇರೆ ವರ್ಷದಲ್ಲಿ ವ್ಯವಹಾರ ಮಾಡಿರುವುದಿಲ್ಲ ಅಂದರೆ ಮೇಲೆ ಹೇಳಿದ ಹಣವನ್ನು ಹೊರತುಪಡಿಸಿ ಬಾಕಿ ಉಳಿದ ಹಣವನ್ನು ಕೊಡಬೇಕಾಗಿತ್ತು. ಒಟ್ಟು ಎಷ್ಟು ಮೊತ್ತದ ಕೋಳಿಗಳನ್ನು ಆರೋಪಿಗೆ ಕೊಟ್ಟಿರುತ್ತೀರಿ ಅಂದರೆ ದಾಖಲೆ ನೋಡಿ ಹೇಳಬೇಕಾಗುತ್ತದೆ. ಆ ದಾಖಲೆಗಳನ್ನು ಮುಂದಿನ ಮುದ್ದತ್ತಿಗೆ ಹಾಜರಪಡಿಸುತ್ತೀರಾ ಅಂದರೆ ಹಾಜರಪಡಿಸುತ್ತೇನೆ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.